

ಸಾಂಪ್ರದಾಯಿಕತೆಯನ್ನು ಮೀರದೆ ಫ್ಯಾಷನಬಲ್ ಕೂಡ ಆಗಿರುವ ಫ್ಲೇರ್ ಸಲ್ವಾರ್ ಟ್ರೆಂಡ್ ಸೃಷ್ಟಿಸಿದೆ. ಹಬ್ಬ ಹರಿದಿನಗಳಲ್ಲಿ ಫ್ಯಾಷನ್‌ಪ್ರಿಯರ ಮನತಣಿಸುವ ಈ ಉಡುಗೆಗಳು ಯುವತಿಯರ ಮೆಚ್ಚು ಕೂಡ ಆಗಿವೆ.

■ ಉಮಾ ಅನಂತ್

# ಫ್ಲೇರ್ ಡ್ರೆಸ್ ಟ್ರೆಂಡ್

ಫ್ಲೇರ್ ಡ್ರೆಸ್ ಎಥ್ನಿಕ್ ಮಾದರಿಯಲ್ಲಿ ಸಾಂಪ್ರದಾಯಿಕ ಉಡುಗೆಗಳಾಗಿದ್ದರೂ ಆಧುನಿಕತೆಯ ಛಾಪಿನೊಂದಿಗೆ ಹೊಸ ಟ್ರೆಂಡ್ ಸೃಷ್ಟಿಸಿವೆ. ಇದು ಫ್ಯಾಷನ್ ಯುಗ. ಸಲ್ವಾರ್‌ನಲ್ಲಿ, ಪ್ಯಾಂಟ್, ಕುರ್ತಿಗಳಲ್ಲಿ, ಪಲಾಜೊಗಳಲ್ಲಿ ಅಷ್ಟೇ ಏಕೆ, ಸೀರೆಗಳಲ್ಲೂ ಅದೆಷ್ಟು ಫ್ಯಾಷನಬಲ್ ಆಗಿರುವವು ದಾಳಿ ಇಟ್ಟಿವೆ? ಫ್ಯಾಷನ್‌ಪ್ರಿಯರ ಮನತಣಿಸುವ ವೈವಿಧ್ಯಮಯ ಡ್ರೆಸ್‌ಗಳು ಟ್ರೆಂಡಿಯಾಗಿಯೂ ಇದ್ದು ಮಹಿಳೆಯರಿಗೆ ಎಲಿಗೆಂಟ್ ಲುಕ್ ಕೊಡುತ್ತಿವೆ.

ಈಗೀಗ ಫ್ಲೇರ್ ಡ್ರೆಸ್‌ಗಳಲ್ಲಿ ಸಾಕಷ್ಟು ವೈವಿಧ್ಯಮಯ ವಿನ್ಯಾಸದವು ಬಂದಿದ್ದು, ಬಣ್ಣ, ವೈವಿಧ್ಯತೆಗಳಲ್ಲಿ ಹತ್ತು ಹಲವು ಆಯ್ಕೆಗಳನ್ನು ಗ್ರಾಹಕರಿಗೆ ನೀಡುತ್ತಿವೆ. ಮಹಿಳೆಯರು ತುಂಬ ಫ್ಯಾಷನಬಲ್ ಆಗಿ ಕಾಣಬೇಕು ಎಂದು ಇದೀಗ ಎಥ್ನಿಕ್‌ನಲ್ಲೂ ಫ್ಲೇರ್ ಆಗಿರುವ ಸಲ್ವಾರ್ ಮೊರೆ ಹೋಗಿದ್ದಾರೆ.

ಸಾಂಪ್ರದಾಯಿಕತೆಯ ಎಲ್ಲೆಯನ್ನು ಮೀರದಿರುವ ಇಂಥ ಉಡುಪು ಆಧುನಿಕ ಮನೋಭಾವದ ಯುವತಿಯರ ಮೆಚ್ಚು. ಇಂಥ ಡ್ರೆಸ್‌ಗಳನ್ನು ಹಲವು ಸಂದರ್ಭಗಳಲ್ಲಿ ಧರಿಸಬಹುದು. ಮದುವೆ, ಮುಂಜಿಗಳಂತಹ ಶುಭ ಸಮಾರಂಭಗಳಿಂದ ಹಿಡಿದು ಫ್ರೆಂಡ್‌ಶಿಪ್ ಡೇ, ವ್ಯಾಲಂಟೇನ್ ಡೇ ಸಂದರ್ಭಗಳಿಗೂ ಸೂಕ್ತವಾಗಿವೆ. ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನ, ಗಣರಾಜ್ಯ ದಿನಗಳಂತಹ ಸಮಾರಂಭಗಳಿಗೆ ಹೋಗುವಾಗ ಇಂಥ ಉಡುಪು ಬಹಳ ಸುಂದರವಾಗಿ ಕಾಣುತ್ತವೆ.

ಬರೀ ಸಲ್ವಾರ್ ಮಾತ್ರವಲ್ಲ. ಸೀರೆಗಳಲ್ಲೂ ಎಥ್ನಿಕ್ ಎವರ್‌ಗ್ರೀನ್ ಟ್ರೆಂಡ್ ಆಗಿವೆ. ಅಂದವಾಗಿರುವ ಬಹು ವರ್ಣದ ಸೀರೆಗಳು ಯುವತಿಯರನ್ನು ಥಟ್ಟನೆ ಸೆಳೆಯುತ್ತವೆ. ಅಲ್ಲದೆ ಎಥ್ನಿಕ್ ಸೀರೆಗಳಿವೆ ವಯಸ್ಸಿನ ಹಂಗಿಲ್ಲ. ಚಿಕ್ಕ ಹುಡುಗಿಯಿಂದ ಹಿಡಿದು ವಯಸ್ಸಾದ ಮಹಿಳೆಯರವರೆಗೆ ಎಲ್ಲರೂ ಆರಾಮವಾಗಿ ಉಟ್ಟುಕೊಳ್ಳುವಂತಿದೆ ಈ ಸೀರೆಗಳು.

## ಹಬ್ಬಕ್ಕೂ ಎಥ್ನಿಕ್ ನಂಟು

ಹಬ್ಬ ಹರಿದಿನಗಳಲ್ಲಿ ಎಂದಿಗೂ ಸಾಂಪ್ರದಾಯಿಕ ಉಡುಪುಗಳೇ ಮೇಲ್ಪಂಕ್ತಿ ಹಾಕುವುದು. ಸೀರೆ, ಸಲ್ವಾರ್‌ಗಳಿಗೇ ಆದ್ಯತೆ. ಪುಟ್ಟ ಹುಡುಗಿಯರು ಜರಿಲಂಗ, ಲಂಗ ದಾವಣಿ ತೊಟ್ಟು ಸಂಭ್ರಮಿಸುವುದು ಇದೆ. ಇದಕ್ಕಾಗಿಯೇ ಹಬ್ಬದ ಸಮಯದಲ್ಲಿ ಎಥ್ನಿಕ್ ಉಡುಪುಗಳದ್ದೇ ಕಾರುಬಾರು. ಸಂಪ್ರದಾಯದ ಮಿತಿಯೊಳಗೆ ಫ್ಯಾಷನ್‌ನ ಪರಿಧಿಯನ್ನೂ ತಲುಪುವ ಗುಣ ಎಥ್ನಿಕ್ ಉಡುಪುಗಳಿಗಿರುವುದು ಇದರ ವಿಶೇಷತೆ. ಮದುವೆ ಸಂದರ್ಭಗಳಲ್ಲೂ ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಫ್ಯಾಷನ್‌ಪ್ರಿಯರು ಎಥ್ನಿಕ್ ಉಡುಪುಗಳತ್ತಲೇ ಚಿತ್ತ ಹರಿಸುವುದು ಗಮನಾರ್ಹ.

ಕೆಲವೊಂದು ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲೂ ಎಥ್ನಿಕ್ ಉಡುಗೆಗಳು ಹಬ್ಬದ ಮಹತ್ವವನ್ನು ಸಾರುವಂತಿರುತ್ತವೆ. ಸ್ವಾತಂತ್ರ್ಯ ದಿನೋತ್ಸವಕ್ಕಾಗಿ ಟ್ರೈಕಲರ್ ಅಥವಾ ಒಂದೇ ಕಲರ್‌ನ ಫ್ಲ್ಯಾಗ್‌ನ ಬಣ್ಣವನ್ನು ಒಳಗೊಂಡ ಉಡುಪು ಚೆನ್ನಾಗಿ ಕಾಣುತ್ತದೆ. ಇದರಲ್ಲಿ ಮಿಕ್ಸ್ ಅಂಡ್ ಮ್ಯಾಚ್ ಕೂಡ ಮಾಡಿಕೊಳ್ಳಬಹುದು. ಸಲ್ವಾರ್, ಅನಾರ್ಕಲಿ ಅಥವಾ ಸೀರೆಗೆ ಇದು ಚೆನ್ನಾಗಿ ಒಪ್ಪುತ್ತದೆ. ಫ್ಲೇರ್ ಉಡುಪುಗಳು ಆಕರ್ಷಕ ಬಣ್ಣಗಳಲ್ಲೂ ಲಭ್ಯವಿದೆ. ■